# ಹೆಚ್ಚುವರಿ ಹಿರಿಯ ವ್ಯವಹಾರ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ಸಾಗರ.

ಸಿ.ಸಿ. ನಂ. 1590/2023

| ಫಿರ್ಯಾದಿಃ- | ವಿರುದ್ಧ | ಆರೋಪಿಃ- |
|---|---|---|
| ಗೋಕುಲ್ ರಾಜ್ ಎಸ್,<br>ಬಿನ್ ಶಿವಾನಂದ್,<br>ವಯಸ್ಸು ಸುಮಾರು 36 ವರ್ಷ,<br>ವಾಸಃ ಆಂಜನೇಯ ದೇವಸ್ಥಾನದ ರಸ್ತೆ,<br>ಸಾಗರ ಟೌನ್, ಶಿವಮೊಗ್ಗ ಜಿಲ್ಲೆ. | | ಸುಧೀರ್ ಶೈಣೈ ಹೆಚ್,<br>ಉಪನ್ಯಾಸಕರು,ಡಿಪ್ಲೋಮಾ ಕಾಲೇಜು,<br>ಸಿಗಂದೂರು ರೋಡ್, ಸಾಗರ ಟೌನ್,<br>ಶಿವಮೊಗ್ಗ ಜಿಲ್ಲೆ. |

## ಆಪಾದನೆ

ಆರೋಪಿಯಾದ ನೀವು, ದಿನಾಂಕಃ 20.03.2021 ರಂದು ತಮ್ಮ ಮಗನ ವಿದ್ಯಾಭ್ಯಾಸದ ಸಲುವಾಗಿ ಪಿರ್ಯಾದುದಾರರಿಂದ ದಿನಾಂಕಃ 20.03.2021 ರಂದು ರೂ. 3,87,500/- ಗಳನ್ನು ಕೈಗಡ ಸಾಲವಾಗಿ ನಗದಾಗಿ ಪಡೆದು, ಮೂರು ತಿಂಗಳ ಒಳಗಾಗಿ ಮರುಪಾವತಿ ಮಾಡುವುದಾಗಿ ತಿಳಿಸಿರುತ್ತೀರಿ. ಆದರೆ, ನೀವು ಸಕಾಲದಲ್ಲಿ ಹಣ ಮರುಪಾವತಿ ಮಾಡದೇ ಇದ್ದಾಗ, ಪಿರ್ಯಾದುದಾರರು ಹಣ ಪಾವತಿಸುವಂತೆ ಪದೇ ಪದೇ ಕೇಳಿದಾಗ, ದಿನಾಂಕಃ 06.12.2021 ರಂದು ಫಿರ್ಯಾದುದಾರಲ್ಲಿಗೆ ಬಂದು, ನಿಮ್ಮ ಖಾತೆ ಇರುವ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ಸಾಗರದ ವರದಾ ರಸ್ತೆ ಶಾಖೆಗೆ ಸೇರಿದ ಚೆಕ್ ನಂ. 656466 ರ ಮೇಲೆ ರೂ. 3,87,500/- ಹಾಗೂ ದಿನಾಂಕಃ 06.12.2021 ಸದರಿ ಚೆಕ್ಕಿಗೆ ನಿಮ್ಮ ಸಹಿ ಮಾಡಿ ನಮೂದಿಸಿ ನಗದಿಕರಿಸಲು ನೀಡಿರುತ್ತೀರಿ.

ನಂತರ, ಫಿರ್ಯಾದುದಾರರು ತಮ್ಮ ಖಾತೆ ಇರುವ ಹೆಚ್.ಡಿ.ಎಫ್.ಸಿ ಬ್ಯಾಂಕ್ ಸಾಗರ ಶಾಖೆಗೆ ನೀವು ನೀಡಿದ ಚೆಕ್ಕನ್ನು ದಿನಾಂಕಃ 06.12.2021 ರಂದು ಸಲ್ಲಿಸಿದಾಗ, 'Funds Insufficient' 'ಸಾಕಷ್ಟು ಹಣವಿಲ್ಲ' ಎಂಬ ಹಿಂಬರಹದೊಂದಿಗೆ ಅಮಾನ್ಯವಾಗಿ ದಿನಾಂಕಃ 21.12.2021 ರಂದು ವಾಪಾಸ್ಸು ಬಂದಿರುತ್ತದೆ. ನಿಮ್ಮ ಖಾತೆಯಲ್ಲಿ ಸಾಕಷ್ಟು ಹಣವಿಲ್ಲವೆಂಬ ವಿಚಾರ ಪಿರ್ಯಾದಿದಾರರಿಗೆ ತಿಳಿದ ನಂತರ, ದಿನಾಂಕಃ 04.01.2022 ರಂದು ವಕೀಲರಿಂದ ಆರ್.ಪಿ.ಎ.ಡಿ ಮೂಲಕ ಹಣ ಪಾವತಿ ಮಾಡುವಂತೆ ನೋಟಿಸ್ ಕಳುಹಿಸಿದ್ದು, ಅದು ನಿಮಗೆ ದಿನಾಂಕಃ 06.01.2022 ರಂದು ಖುದ್ದು ಜಾರಿಯಾಗಿದ್ದರು ಸಹಾ ನೀವು ಸಾಲವನ್ನು ಮರುಪಾವತಿಸದೇ ಮತ್ತು ನಿಮ್ಮ ಖಾತೆಯಲ್ಲಿ ಸಾಕಷ್ಟು ಹಣವಿಲ್ಲ ಎಂಬ ವಿಚಾರ

ಗೊತ್ತಿದ್ದರೂ ಫಿರ್ಯಾದುದಾರರಿಗೆ ಮೋಸ, ವಂಚನೆ ಮಾಡಬೇಕೆಂಬ ಉದ್ದೇಶದಿಂದ ಚೆಕ್ಕು ನೀಡಿ, ಆ ಮೂಲಕ ನೀವು, ಎನ್. ಐ. ಆಕ್ಟ್ ಕಲಂ 138 ರಡಿಯಲ್ಲಿ ಅಪರಾಧವೆಸಗಿರುತ್ತೀರಿ ಎಂದು ಈ ಮೂಲಕ ಆಪಾದಿಸಲಾಗಿದ್ದು, ಅದು ಈ ನ್ಯಾಯಾಲಯದ ಸಂಜ್ಞೆಯಲ್ಲಿ ಇದೆ.

(ಆಪಾದನೆಯನ್ನು ದಿನಾಂಕಃ 27.08.2024 ರಂದು ತೆರೆದ ನ್ಯಾಯಾಲಯದಲ್ಲಿ ಮಾಡಲಾಗಿದೆ.)

ಪ್ರಶ್ನೆ 1. ನಿಮಗೆ ಈ ಪ್ರಕರಣದಲ್ಲಿ ಮಾಡಿರುವ ಆಪಾದನೆ ಅಂಶಗಳನ್ನು ತಿಳಿಯುವ ಭಾಷೆಯಲ್ಲಿ ಓದಿ ವಿವರಿಸಲಾಗಿ ಮನವರಿಕೆಯಾಯಿತೇ?
ಉತ್ತರಃ-

ಪ್ರಶ್ನೆ 2. ನೀವು ತಪ್ಪನ್ನು ಒಪ್ಪಿಕೊಳ್ಳುವಿರಾ ಅಥವಾ ವಿಚಾರಣೆಯಾಗಬೇಕಾ?
ಉತ್ತರಃ-

(ದೀಪ ಕೆ.ಆರ್.)
ಹೆಚ್ಚುವರಿ ಹಿರಿಯ ವ್ಯವಹಾರ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ., ಸಾಗರ.